OS.55/2024
PW-1

**ದಿನಾಂಕಃ 04.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಬಿ ಎನ್ ಟಿ ವಕೀಲರಿಂದಃ**

ನಾನು ಈ ವ್ಯಾಜ್ಯದಲ್ಲಿ ವಾದಿಯಾಗಿದ್ದು, ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದ್ದು, ನನ್ನ ವಕೀಲರಿಗೆ ನಾನೇ ನನ್ನ ಪರವಾಗಿ ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಅಂಶಗಳನ್ನು ಹೇಳಿ ಬರೆಸಿದ್ದು, ನಾನೇ ಹೇಳಿ ಬೆರಳಚ್ಚು ಮಾಡಿಸಿ ಓದಿ, ತಿಳಿದುಕೊಂಡು ಸಹಿಯನ್ನು ಹಾಕಿರುತ್ತೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ನಾನು ಈ ಕೆಳಕಂಡ ದಾಖಲಾತಿಗಳನ್ನು, ಈ ದಾವೆಯಲ್ಲಿ ನನ್ನ ಪರವಾಗಿ ಹಾಜರುಪಡಿಸಿ, ನಿಶಾನೆಗೆ ನನ್ನ ಪರವಾಗಿ ಒಳಪಡಿಸಿಕೊಂಡಿರುತ್ತೇನೆ.

1. ದಾವಾ ಆಸ್ತಿಗೆ ಸಂಬಂಧಿಸಿದಂತೆ 4 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ–1 ರಿಂದ 4 ಎಂದು ಗುರುತಿಸಲಾಯಿತು.

2. ದಾವಾ ಆಸ್ತಿಗೆ ಸಂಬಂಧಿಸಿದಂತೆ ಎಂ.ಆರ್.ನಂ.ಹೆಚ್ 1/2021–22ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–5 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ನ್ಯಾಯದಾನ ದೃಷ್ಟಿಯಿಂದ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ನೀಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**